ಓ ಎಸ್ ನಂ. 25/2017
ಪಿ ಡಬ್ಲ್ಯು 1
ದಿನಾಂಕ 05/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 6 ರಿಂದ 9 ನೇ ಪ್ರತಿವಾದಿಗಳ ಪರಃ ಶ್ರೀ ಹೆಚ್ ಟಿ ವಕೀಲರಿಂದಃ

1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ದಾವಾ ಐಟಂ ನಂ.1 ರ ಲ್ಲಿ 3 ಎಕರೆ 20 ಗುಂಟೆ ಮಾರಾಟ ಮಾಡಿದ ವಿಚಾರ ನನಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ಕ್ರಯಪತ್ರವಾದ ಎರಡು ವರ್ಷಗಳ ನಂತರ ಎಂದು ನುಡಿಯುತ್ತಾರೆ. ಸದರಿ 3 ಎಕರೆ 20 ಗುಂಟೆ ಜಮೀನನ್ನು ಒಟ್ಟಿಗೆ ಮಾರಾಟ ಮಾಡಿರುತ್ತಾರಾ ಪ್ರತ್ಯೇಕವಾಗಿ ಮಾರಾಟ ಮಾಡಿರುತ್ತಾರಾ ಮತ್ತು ಯಾವಾಗ ಯಾವಾಗ ಮಾರಾಟ ಮಾಡಿರುತ್ತಾರೆ ಎಂಬ ವಿಚಾರ ಗೊತ್ತಾ ಎಂದರೆ ಸಾಕ್ಷಿ ದಾಖಲೆ ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. 2017 ನೇ ಇಸವಿಯಲ್ಲಿ ಪಹಣಿ ಪರಿಶೀಲಿಸಿದಾಗ 6 ನೇ ಪ್ರತಿವಾದಿ ಖಲಂದರ್ ಖಾನ್ ರವರ ಮಕ್ಕಳ ಹೆಸರಿಗೆ ಖಾತೆಯಾಗಿರುವ ವಿಚಾರ ನನಗೆ ಗೊತ್ತಾಗಿರುತ್ತದೆ. ಪ್ರಸ್ತುತ ದಾವೆಯನ್ನು ಹೂಡುವ ಮೊದಲೇ 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿತ್ತ ಇಲ್ಲವೇ ಎಂದರೆ ಸಾಕ್ಷಿ ಹೌದು ಗೊತ್ತಿತ್ತು ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರವನ್ನು ದಾವೆ ಹೂಡುವ ವಿಚಾರದಲ್ಲಿ ನನ್ನ ವಕೀಲರಿಗೆ

ಮಾಹಿತಿ ನೀಡಿರುತ್ತೇನಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಮರೆತಿದ್ದೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ 3 ಎಕರೆ 20 ಗುಂಟೆ  ಜಮೀನನ್ನು ಯಾವಾಗ ಮಾರಾಟ ಮಾಡಿದ್ದಾರೆಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ 1994 ರಲ್ಲಿ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ಸರ್ವೆ ನಂ.119 ರ 12 ಎಕರೆ 17 ಗುಂಟೆ ಜಮೀನಿನ ಪೈಕಿ 20 ಗುಂಟೆ ಆಸ್ತಿಯನ್ನು ನಾನು ಮುಸ್ರುಫ್ ಅಹಮ್ಮದ್ ಬಿನ್ ಅಬ್ದುಲ್ ಬಶೀರ್ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ಅದನ್ನು ನಾನು ಮಾರಾಟ ಮಾಡಿಲ್ಲ ಅದನ್ನು 1 ನೇ ಪ್ರತಿವಾದಿ ಮಾರಾಟ ಮಾಡಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ 20 ಗುಂಟೆ ಜಮೀನನ್ನು ಮಾರಾಟ ಮಾಡಿದ್ದರಿಂದ ಬಂದ ಹಣವನ್ನು ಮುಸ್ರುಫ್ ಅಹಮ್ಮದ್ ರವರಿಂದ ನಾನೇ ಪಡೆದಿರುತ್ತೇನೆ ಎಂದರೆ ಸುಳ್ಳು. ನಾನು ಚಿಕ್ಕಮಗಳೂರಿನಲ್ಲಿ ಸುಮಾರು 35 ವರ್ಷಗಳಿಂದ ವಾಸಿಸುತ್ತಿದ್ದೇನೆ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಎಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸಾಕ್ಷಿ ಹುಲಿಕೆರೆ ಗ್ರಾಮದಲ್ಲಿ ಎಂದು ನುಡಿಯುತ್ತಾರೆ. ಸದರಿ ಹುಲಿಕೆರೆ ಗ್ರಾಮ ಕಡೂರು ತಾಲ್ಲೂಕಿಗೆ ಸಂಬಂದಪಟ್ಟದ್ದು ಎಂದರೆ ಸರಿ. 20 ಗುಂಟೆ ಜಮೀನನ್ನು ಮುಸ್ರುಫ್ ಅಹಮ್ಮದ್ ರವರಿಗೆ ಮಾರಾಟ ಮಾಡಿದ ನಂತರದಲ್ಲಿ ನಾನು ಚಿಕ್ಕಮಗಳೂರಿಗೆ ಹೋಗಿ ನೆಲೆಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದಕ್ಕೂ ಮೊದಲೇ ನಾನು ನೆಲೆಸಿದ್ದೆ ಎಂದು

ನುಡಿಯುತ್ತಾರೆ. 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿರುವ 3 ಎಕರೆ 20 ಗುಂಟೆ ಜಮೀನು ಸದರಿ 1 ನೇ ಪ್ರತಿವಾದಿಗೆ ಸೇರಿದ ಆಸ್ತಿಯಾಗಿದ್ದು ಅದರಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ 1988 ರಲ್ಲಿ ವಿಭಾಗ ಮಾಡಿಕೊಂಡಿದ್ದು, ಅದರಂತೆ ನನ್ನ ಭಾಗಕ್ಕೆ 20 ಗುಂಟೆ ಜಮೀನು ಮತ್ತು 10 ಸಾವಿರ ನಗದು ಹಣವನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸುಳ್ಳು. ನನ್ನ ಭಾಗಕ್ಕೆ ಬಂದಂತಹ 20 ಗುಂಟೆ ಜಮೀನನ್ನು ಮುಸ್ರಫ್ ಅಹಮ್ಮದ್ ರವರಿಗೆ ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸುಳ್ಳು.

ನನ್ನ ತಂದೆ ಖಾಸಿಂಸಾಬ್ ರವರು ಮರಣ ಹೊಂದುವವರೆಗೂ 1 ನೇ ಪ್ರತಿವಾದಿ ಜತೆ ವಾಸ ಇದ್ದರು ಎಂದರೆ ಸರಿ. ನನಗೆ ಭಾಗ ನೀಡಿದ ಬಾಬ್ತು ಹುಲಿಕೆರೆ ಗ್ರಾಮದಲ್ಲಿ ನಮ್ಮ ಸಮಾಜದ ಮುಖಂಡರು ಸೇರಿಕೊಂಡು ಅವರ ಸಮಕ್ಷಮದಲ್ಲಿ ಒಂದು ಪತ್ರ ಸಹ ಆಗಿತ್ತು ಎಂದರೆ ಸುಳ್ಳು. ನನಗೆ ಆಸ್ತಿ ಬರಬೇಕೆಂದು ಕೋರಿ ನಾನು ಎಷ್ಟು ಬಾರಿ ದಾವೆ ಹೂಡಿದ್ದೇನೆ ಎಂದರೆ ಸಾಕ್ಷಿ ಪ್ರಸ್ತುತ ದಾವೆ ಅಲ್ಲದೆ ನಾನು ಇನ್ನೊಂದು ದಾವೆ ಹೂಡಿದ್ದೆ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಯಾವಾಗ ಹೂಡಿರುತ್ತೇನೆ ಎಂದರೆ ಸಾಕ್ಷಿ 1994 ರಲ್ಲಿ ಎಂದು ನುಡಿಯುತ್ತಾರೆ. 1994 ರಲ್ಲಿ ನಾನು ಹೂಡಿದ ದಾವೆಯಲ್ಲಿ ಈ ದಾವೆಯ ಪ್ರತಿವಾದಿ 6 ರಿಂದ 9 ರವರನ್ನು ಸೇರಿಸಿರುತ್ತೇನಾ ಎಂದರೆ ಸಾಕ್ಷಿ 6 ನೇ ಪ್ರತಿವಾದಿಯನ್ನು

ಮಾತ್ರ ಆ ದಾವೆಯಲ್ಲಿ ಸೇರಿಸಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯಿಂದ 6 ನೇ ಪ್ರತಿವಾದಿಗೆ ಆದ ಕ್ರಯಪತ್ರದಂತೆ 6 ನೇ ಪ್ರತಿವಾದಿ ಹೆಸರಿಗೆ ಖಾತೆ ಪಹಣಿ ಬಂದಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ 1992-93 ರಲ್ಲಿಯೇ ಆಸ್ತಿಯನ್ನು ಪ್ರತ್ಯೇಕವಾಗಿ ಮಾರಾಟ ಮಾಡಿರುತ್ತಾರೆ 1994 ರಲ್ಲಿ ಅಲ್ಲ ಎಂದರೆ ಸಾಕ್ಷಿ ಆಗಿರಬಹುದು ಆದರೆ 1994 ರಲ್ಲಿ ನನಗೆ ವಿಚಾರ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. 1994 ರಲ್ಲಿ ನನಗೆ ವಿಚಾರ ತಿಳಿದ ನಂತರ ಅದನ್ನು ಪ್ರಶ್ನೆ ಮಾಡಲು ನನಗೆ ಯಾವುದೇ ಅಭ್ಯಂತರ ಇರಲಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ನನಗೆ ಅನಾರೋಗ್ಯ ಇತ್ತು ಎಂದು ನುಡಿಯುತ್ತಾರೆ. 1994 ರಲ್ಲಿ ನಾನು ಹೂಡಿದ ದಾವೆಯಲ್ಲಿ ಈ ದಾವೆಯ 6 ನೇ ಪ್ರತಿವಾದಿ ಖಲಂದರ್ ಖಾನ್ ರವರನ್ನು ಸೇರಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 1994 ರಲ್ಲಿ ಹೂಡಿದ ದಾವೆ ಏನಾಯಿತು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಆ ಸಮಯದಲ್ಲಿ ನನಗೆ ಅನಾರೋಗ್ಯ ಸಮಸ್ಯೆ ಇತ್ತು ಎಂದು ನುಡಿಯುತ್ತಾರೆ. 1992-93 ರಿಂದಲೇ 6 ನೇ ಪ್ರತಿವಾದಿ 3 ಎಕರೆ 20 ಗುಂಟೆ ಜಮೀನನ್ನು ಖರೀದಿಸಿದಾಗಿನಿಂದ ಆ ಜಮೀನನ್ನು ಸಾಕಷ್ಟು ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಮಾರಾಟ ಮಾಡುವ ಸಮಯದಲ್ಲಿ ಖಾಲಿ ಜಮೀನಾಗಿದ್ದು, ಅದನ್ನು 6 ನೇ ಪ್ರತಿವಾದಿ ತೋಟವಾಗಿ ಪರಿವರ್ತಿಸಿರುತ್ತಾರೆ ಎಂದರೆ ಸರಿ. 2009-10 ರಲ್ಲಿ ಸದರಿ 6 ನೇ

ಪ್ರತಿವಾದಿ ಅವರ ಮಕ್ಕಳು ಮತ್ತು ಕುಟುಂಬದ ನಡುವೆ ಮೇಲ್ಕಂಡ 3 ಎಕರೆ 20 ಗುಂಟೆ ಜಮೀನನ್ನು ವಿಭಾಗ ಮಾಡಿಕೊಂಡು ಸದರಿ ವಿಭಾಗದಂತೆ ಹಿಸ್ಸೆದಾರರು ಆ ಸ್ವತ್ತಿನ ಸ್ವಾಧೀನದಲ್ಲಿದ್ದು, ಅವರವರ ಹೆಸರಿಗೆ ಖಾತೆಗಳು ಬಂದಿರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳ ಆಧಾರದ ಮೇಲೆ 6 ರಿಂದ 9 ನೇ ಪ್ರತಿವಾದಿಗಳು ಬ್ಯಾಂಕಿನಿಂದ ಸಾಲವನ್ನು ಸಹ ಪಡೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 3 ಎಕರೆ 20 ಗುಂಟೆ ಆಸ್ತಿಯ ಮೇಲೆ 1 ನೇ ಪ್ರತಿವಾದಿಗೆ ಸಂಪೂರ್ಣವಾದ ಹಕ್ಕು ಅಧಿಕಾರ ಇದ್ದು ಅದನ್ನು ಪರಿಶೀಲಿಸಿಯೇ ಆ ಜಮೀನನ್ನು 6 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಸುಳ್ಳು. ಸದರಿ 3 ಎಕರೆ 20 ಗುಂಟೆ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ 6 ನೇ ಪ್ರತಿವಾದಿ ಖರೀದಿ ಮಾಡಿರುವ ಸದರಿ 3 ಎಕರೆ 20 ಗುಂಟೆ ಜಮೀನು ನನ್ನ ಮತ್ತು 1 ರಿಂದ 5 ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಸ್ವತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 3 ಎಕರೆ 20 ಗುಂಟೆ ಆಸ್ತಿಯ ಮೇಲೆ ನನಗೆ ಯಾವುದೇ ಅಧಿಕಾರ ಹಕ್ಕು ಇಲ್ಲದೆ ಇದ್ದರೂ ಸಹ ಸದರಿ ಆಸ್ತಿಯನ್ನುಕಬಳಿಸುವ ಸಲುವಾಗಿ 6 ರಿಂದ 9 ನೇ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ಸದರಿ 3 ಎಕರೆ 20 ಗುಂಟೆ ಆಸ್ತಿಗೆ 6 ರಿಂದ 9 ನೇ ಪ್ರತಿವಾದಿಗಳೇ ಕಾನೂನು ಬದ್ದ ಮಾಲೀಕರು ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.